**ದಿನಾಂಕಃ 09-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

3. ನಾನು ತುರ್ತು ಚಿಕಿತ್ಸಾ ವಾಹನ ಹತ್ತಿದ ನಂತರ ಆಕೆಗೆ ಏನಾಯಿತು ಎಂದು ಕೇಳಿದೆ. ಆಗ ನನ್ನ ಮಗಳು ಶಬರೀನಾ ಆಕೆಗೆ ಸಬೀನಾ ಬೆಂಕಿ ಹಚ್ಚಿದ್ದಾಗಿ ಹೇಳಿದಳು. ನಾವು ತುರ್ತು ಚಿಕಿತ್ಸಾ ವಾಹನದಲ್ಲಿ ಹುಬ್ಬಳ್ಳಿಯ ಕಿಮ್ಸ ಆಸ್ಪತ್ರೆಗೆ ಹೋದೆವು. ಅಲ್ಲಿ ಆಕೆಯನ್ನು ಒಳರೋಗಿಯಾಗಿ ದಾಖಲು ಮಾಡಿಕೊಂಡರು. ಅಲ್ಲಿ ಒಳರೋಗಿಯಾಗಿ ಇದ್ದಾಗ ಸಹ ಆಕೆ ನನ್ನ ಜೊತೆ ಮಾತನಾಡುತ್ತಿದ್ದಳು. ದಿನಾಂಕ 14.02.2015 ರಂದು ಹೊನ್ನಾವರ ಪೊಲೀಸನವರು ಆಸ್ಪತ್ರೆಗೆ ಬಂದರು. ನನ್ನ ಮಗಳನ್ನು ವಿಚಾರಣೆ ಮಾಡಿದರು. ವಿಚಾರಣೆ ಮಾಡುವಾಗ ನನ್ನನ್ನು ಸ್ವಲ್ಪ ಪಕ್ಕಕ್ಕೆ ಕಳುಹಿಸಿದರು. ಪೊಲೀಸನವರು ಆಕೆಯನ್ನು ಪ್ರಶ್ನಿಸುವುದು ನನಗೆ ಕೇಳಿಸುತ್ತಿತ್ತು. ನನ್ನ ಮಗಳು ಪೊಲೀಸನವರಿಗೆ ಉತ್ತರಿಸುತ್ತಿದ್ದದ್ದು ನನಗೆ ಕೇಳಿಸುತ್ತಿತ್ತು. ಪೊಲೀಸನವರು ಬರೆದುಕೊಂಡ ಹೇಳಿಕೆಗೆ ನನ್ನ ಮಗಳು ಹೆಬ್ಬೆಟಿನ ಗುರುತು ಹಾಕಿದಳು. ಆ ಸಮಯದಲ್ಲಿ ನನ್ನ ಗಂಡ, ನಾನು ಹಾಗೂ ನನ್ನ ಮಗಳನ್ನು ನೋಡಲು ಬಂದ ಕೆಲವರು ಇದ್ದೆವು. ಆಗ ನೊಡಲು ಬಂದಿದ್ದವರು ದೋಸಾ-13 ಮತ್ತು 14 ಅಗಿರುತ್ತಾರೆ. ದಿನಾಂಕ 04.03.2015 ರಂದು ಸಂಜೆ 7.30-8.00 ಗಂಟೆಗೆ ಆಸ್ಪತ್ರೆಯಿಂದ ಕರೆ ಬಂತು. ನನ್ನ ಮಗಳು ಮೃತಪಟ್ಟಿರುವುದಾಗಿ ತಿಳಿಸಿದರು, ಕೂಡಲೇ ನಾನು ಆಸ್ಪತ್ರೆಗೆ ಹೋದೆ. ದಿನಾಂಕ 05.03.2015 ರಂದು ತಹಶೀಲ್ದಾರವರು ಆಸ್ಪತ್ರೆಗೆ ಬಂದು ನನ್ನ ಮಗಳ ಶವದ ಪಂಚನಾಮೆ ಮಾಡಿದರು. ಆಗ ಮಧ್ಯಾಹ್ನ ಸುಮಾರು 2.30 ಗಂಟೆ ಆಗಿತ್ತು. ನಾನು ಆಗ ನನ್ನ ಮಗಳ ಶವವನ್ನು ಗುರುತಿಸಿದೆ. ಪೊಲೀಸನವರು ಈ ಪ್ರಕರಣದ ಬಗ್ಗೆ ನನ್ನ ಹೇಳಿಕೆಯನ್ನು ಪಡೆದಿದ್ದಾರೆ. ನನ್ನ ಮಗಳು ಸ್ವತಃ ಆತ್ಮಹತ್ಯೆ ಮಾಡಿಕೊಳ್ಳಲು ಯಾವುದೇ ಕಾರಣ ಇರಲಿಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್ ಬಿ ಎಸ್ ರವರಿಂದಃ-**

4. ಘಟನೆಯ ಬಗ್ಗೆ ಮೊದಲು ನನಗೆ ದೂರವಾಣಿ ಕರೆ ಬಂತು. ನನ್ನ ಮೃತ ಮಗಳು ಶಬರೀನ್ ಳೇ ದೂರವಾಣಿ ಕರೆ ಮಾಡಿ ನನಗೆ ಶಬೀನಾ ಆಕೆಗೆ ಸುಡುತ್ತಿದ್ದಾಳೆ ಎಂದು ಹೇಳಿದಳು ಆಗ ದೂರವಾಣಿ ಸಂಪರ್ಕ ಕಡಿತವಾಯಿತು. ನಂತರ ನಾನು ದೂರವಾಣಿ ಕರೆಯನ್ನು ಆಕೆಗೆ ಮಾಡುತ್ತಲೇ ಇದ್ದೆ ಆಕೆ ಸ್ವೀಕರಿಸಲಿಲ್ಲ. ನಾನು ಯಲ್ಲಾಪುರದಿಂದ ಹುಬ್ಬಳ್ಳಿಯ

ಕೆ.ಎಮ್.ಸಿ ಆಸ್ಪತ್ರೆಗೆ ನನ್ನ ಮಗಳನ್ನು ಕರೆತಂದ ತುರ್ತು ಚಿಕಿತ್ಸಾ ವಾಹನದಲ್ಲಿ ಹೋದೆ. ಆಗ ಜೊತೆಯಲ್ಲಿ ದೋಸಾ–21 ಮತ್ತು 22 ರವರು ಆ ವಾಹನದಲ್ಲಿ ಇದ್ದರು. ನನ್ನ ಗಂಡ ಸಹ ಆಗ ಇದ್ದರು. ಕೆ.ಎಮ್ ಸಿ ಆಸ್ಪತ್ರೆಗೆ ಹೋದಾಗ ರಾತ್ರಿ 2.30 ಗಂಟೆ ಆಗಿತ್ತು. ನನ್ನ ಮಗಳಿಗೆ ಬೆನ್ನಿನ ಮೇಲೆ ಪೂರ್ತಿ ಸುಟ್ಟ ಗಾಯ ಆಗಿತ್ತು. ತಲೆಯ ಕೂದಲು ಸುಟ್ಟಿತ್ತು, ಮುಖದ ಮೇಲೆ ಸ್ವಲ್ಪ ಸುಟ್ಟದ ಗಾಯ ಆಗಿತ್ತು, ಕೈ ಮತ್ತು ಭುಜದ ಮೇಲೆ ಸುಟ್ಟ ಗಾಯ ಆಗಿತ್ತು. ಆಕೆಯ ತುಟಿ ಸುಟ್ಟಿತ್ತು ಎಂದರೆ ಸರಿಯಲ್ಲ. ಸುಟ್ಟ ಗಾಯಗಳ ಕಾರಣ ಆಕೆಯ ಮುಖ ಊದಿಕೊಂಡಿತ್ತು ಎಂದರೆ ಸ್ವಲ್ಪ ಊದಿತ್ತು ಆದರೆ ಆಕೆ ಚನ್ನಾಗಿ ಮಾತನಾಡುತ್ತಿದ್ದಳು. ಸುಟ್ಟ ಗಾಯಗಳ ಕಾರಣ ಆಕೆಗೆ ಮಾತನಾಡಲು ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಆಕೆ ಸಾಯುವ ತನಕ ಸಬೀನಾ ಆಕೆಗೆ ಸುಟ್ಟಿದ್ದಾಗಿ ಹೇಳುತ್ತಿದ್ದಳು. ಆಕೆಯ ಹೇಳಿಕೆಯನ್ನು ಪೊಲೀಸನವರು ಪಡೆದಾಗ ನಾನು, ದೋಸಾ–13, 14, ನನ್ನ ಗಂಡ ದೋಸಾ–17 ಇದ್ದೆವು. ಅವರನ್ನು ಬಿಟ್ಟು ಬೇರೆ ಯಾರೂ ಆಗ ಇರಲಿಲ್ಲ, ಪೊಲೀಸನವರು ಇದ್ದರು. ಇಬ್ಬರು ಪೊಲೀಸನವರು ಇದ್ದರು. ಒಬ್ಬ ಮಹಿಳಾ ಪೊಲೀಸ ಇದ್ದರು. ಒಬ್ಬ ಪುರುಷ ಪೊಲೀಸ ಇದ್ದರು. ಹೇಳಿಕೆಯನ್ನು ಅವರಿಬ್ಬರಲ್ಲಿ ಯಾರೂ ಪಡೆದರು ಎಂದರೆ ಒಬ್ಬರು ಪ್ರಶ್ನಿಸುತ್ತಿದ್ದರು ಇನ್ನೊಬ್ಬರು ಬರೆದುಕೊಳ್ಳುತಿದ್ದರು. ನನ್ನ ಮಗಳನ್ನು ಉರ್ದು ಭಾಷೆಯಲ್ಲಿ ಮತ್ತು ಕನ್ನಡ ಭಾಷೆಯಲ್ಲಿ ಪೊಲೀಸನವರು ಪ್ರಶ್ನಿಸುತ್ತಿದ್ದರು. ನನ್ನ ಮಗಳಿಗೆ ಕನ್ನಡ ಬರುತ್ತಿರಲಿಲ್ಲ ಎಂದರೆ ಸ್ವಲ್ಪ ಸ್ವಲ್ಪ ಕನ್ನಡ ಬರುತ್ತಿತ್ತು ಆದ್ದರಿಂದ ಉರ್ದು ಮತ್ತು ಕನ್ನಡ ಎರಡೂ ಭಾಷೆಯಲ್ಲಿ ಆಕೆಯನು ಪ್ರಶ್ನಿಸುತ್ತಿದ್ದರು. ಆ ಹೇಳಿಕೆಯ ಮೇಲೆ ನಾನು ಸಹಿ ಮಾಡಿಲ್ಲ, ನನ್ನ ಗಂಡ, ದೋಸಾ–13, 14 ರವರು ಸಹಿ ಮಾಡಿದ್ದಾರೆ. ನಾನು ಆ ಹೇಳಿಕೆಯನ್ನು ನೋಡಿರುತ್ತೇನೆ. ಆದರೆ ಅದು ಕನ್ನಡ ಭಾಷೆಯಲ್ಲಿ ಇತ್ತು ನನಗೆ ಅದರಲ್ಲಿ ಏನು ಬರೆದಿದೆ ಎಂದು ಗೊತ್ತಾಗಿರುವುದಿಲ್ಲ. ಅದರಲ್ಲಿ ಏನು ಬರೆದಿದೆ ಎಂದು ಪೊಲೀಸನವರು ನನಗೆ ಓದಿ ಹೇಳಿರುವುದಿಲ್ಲ. ನನ್ನ ಮಗಳನ್ನು ವಿಚಾರಣೆ ಮಾಡಿದಾಗ ನಾನು ಅದೇ ವಾರ್ಡ ಒಳಗಡೆ ಇದ್ದೆ.

5. ಶವ ಪಂಚಾಮೆಯನ್ನು ಆಕೆ ಮೃತ ಪಟ್ಟ ಮಾರನೇ ದಿನ ಮಾಡಿದರು. ಆ ಶವ ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅದಕ್ಕೆ ಅಲ್ಲಿ ಇದ್ದವರ ಸಹಿ ಪಡೆದರು. ಆದರೆ ನಾನು ಬಹಳ ಅಳುತ್ತಿದ್ದೆ ಯಾರ ಸಹಿ ಪಡೆದರು ಎಂದು ನಾನು ನೋಡಿರುವುದಿಲ್ಲ. ನಾನು ಪೊಲೀಸನವರಿಗೆ ಹೇಳಿಕೆ ಕೊಟ್ಟಿಲ್ಲ.

**ಮರು ವಿಚಾರಣೆಃ ಸ.ಅ. ರವರಿಂದ – ಇಲ್ಲ –**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ